## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂಃ 504/2020 ಸಿ.ಡಬ್ಲ್ಯೂ –1 ಪಿ.ಡಬ್ಲ್ಯೂ -1

| | | |
|---|---|---|
| ಹೆಸರು | ಃ | ಶಾಂತಕುಮಾರ |
| ತಂದೆಃ ಗಂಡ | ಃ | ಸಿದ್ದಪ್ಪ |
| ವಯಸ್ಸು | ಃ | ೨೮ ವರ್ಷ |
| ಉದ್ಯೋಗ | : | ಬೆರಳಚ್ಚುಗಾರ |
| ವಾಸಸ್ಥಳ | ಃ | ಆಳಂದ |

ದಿನಾಂಕಃ೨೮.೧೨.೨೦೨೩
ಸತ್ಯ ಪ್ರತಿಜ್ಞೆಯ ಮೇರೆಗೆ

---

### ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ

ಆರೋಪಿತರ ಪರಿಚಯ ಇರುತ್ತದೆ. ಚಾಸಾ-2 ರಿಂದ 4 ರವರ ಪರಿಚಯ ಇರುತ್ತದೆ. ಚಾಸಾ-5 ನನ್ನ ಸಹೋದ್ಯೋಗಿ ಇರುತ್ತಾರೆ.

ದಿ.28.05.2020 ರಂದು ಮೂರು ಜನ ಆರೋಪಿತರು ಆಸ್ಪತ್ರೆಗೆ ಬಂದು ಡ್ರೆಸಿಂಗ್ ಮಾಡಿಸಿಕೊಂಡು ನಮ್ಮ ಜೊತೆ ಗಲಾಟೆ ಮಾಡಿ ಹೋಗಿರುತ್ತಾರೆ. ಮರು ದಿನ 29.05.2020 ರಂದು ನಾವು ಆಸ್ಪತ್ರೆಯ ಮುಂದೆ ನಿಂತಾಗ ಮೂರು ಜನ ಆರೋಪಿತರು ಬಂದು ಅವಾಚ್ಯ ಶಬ್ದಗಳಿಂದ ನಮ್ಮನ್ನು ಬಯ್ಯಲು ಆರಂಭಿಸಿದರು, ಆಗ ನಾನು ಒಳಗಡೆ ಹೋಗುತ್ತಿರುವಾಗ ನನ್ನನ್ನು ತಡೆದು ನಿಲ್ಲಿಸಿ ಆರೋಪಿ ನಂ.೧ ನನ್ನ ಎದೆಯ ಮೇಲಿನ ಅಂಗಿ ಹಿಡಿದು ಎಳೆದಾಡಿ ಕೈಯಿಂದ ಕಪಾಳಕ್ಕೆ ಹೊಡೆದನು. ಅಲ್ಲೇ ಬಿದ್ದಿರುವ ಕಲ್ಲನ್ನು ತೆಗೆದುಕೊಂಡು ನನ್ನ ಬಲಗೈಯ ಮುಷ್ಠಿಯ ಕೆಳಗಡೆ ಹೊಡೆದು ಎಲುಬು ಮುರಿದಿರುತ್ತಾನೆ. ಆರೋಪಿ ನಂ.೨ ಮುಷ್ಠಿಯಿಂದ ಬೆನ್ನ ಮೇಲೆ ಹೊಡೆದಿರುತ್ತಾನೆ. ಆರೋಪಿ ನಂ.೩ ನನ್ನನ್ನು ಹಿಡಿದುಕೊಂಡಿರುತ್ತಾನೆ. ಆಗ ಚಾಸಾ-೪ ಮತ್ತು ೫ ರವರು ಬಂದು ಜಗಳ ಬಿಡಿಸಿರುತ್ತಾರೆ. ನಂತರ ನಾನು ನಮ್ಮ ಸರಕಾರಿ ಆಸ್ಪತ್ರೆಯಲ್ಲಿಯೇ ಸ್ಕ್ಯಾನಿಂಗ ಮಾಡಿಸಿಕೊಂಡೆನು ನನ್ನ ಎಲುಬು ಮುರಿದಿತ್ತು, ನಂತರ ನಾನು ಠಾಣೆಗೆ ಹೋಗಿ ಫಿರ್ಯಾದಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿ ಫಿರ್ಯಾದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಫಿರ್ಯಾದಿಯನ್ನು ನಿಪಿ-೧ ಎಂದು ಸಹಿಯನ್ನು ನಿಪಿ-೧(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಒಂದು ಕಲ್ಲನ್ನು ನೋಡಿ ಗುರುತಿಸಿದ್ದರಿಂದ ಅದನ್ನು ಮು.ಮಾ-೧ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

### ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.

ಆರೋಪಿತರು ಆಸ್ಪತ್ರೆಗೆ ಬಂದಾಗ ಸಮಯ 3.15 ಗಂಟೆ ಆಗಿತ್ತು ಎಂದರೆ ಸರಿ. ಆರೋಪಿತರು ಬಂದು ನಿನ್ನೆ ಡ್ರೆಸ್ಸಿಂಗ್ ಸರಿಯಾಗಿ ಮಾಡಿಲ್ಲ ಸೂಳೆ ಮಕ್ಕಳೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ

ಸರಿ. ನನ್ನ ಕರ್ತವ್ಯಕ್ಕೆ ಅಡೆ ತಡೆ ಮಾಡಿರುತ್ತಾರೆ ಎಂದರೆ ಸರಿ. ಆರೋಪಿ ನಂ.೩ ಈ ಮಕ್ಕಳಿಗೆ ಹೊಡೆದು ಖಲಾಸ ಮಾಡೋಣ ಎಂದು ಹೇಳಿ ಜೀವ ಬೆದರಿಕೆ ಹಾಕಿರುತ್ತಾನೆ ಎಂಧರೆ ಸರಿ.

[ ಈ ಹಂತದಲ್ಲಿ ಸ.ಅ.ಅ. ರವರು ಮುಂದಿನ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು. ]

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ಆಳಂದ